# ಸ್ವಾಮಿ ವಿವೇಕಾನಂದರ ದಿವ್ಯಸ್ಮೃತಿ

**ಹರಿಪದ ಮಿತ್ರ**

**ತಮ್ಮ ಪರಿವ್ರಾಜಕ ದಿನಗಳಲ್ಲಿ ಸ್ವಾಮಿ ವಿವೇಕಾನಂದರು ಬೆಳಗಾಮಿನಲ್ಲಿ ಅರಣ್ಯಾಧಿಕಾರಿಗಳಾಗಿದ್ದ ಹರಿಪದ ಮಿತ್ರರ ಮನೆಯಲ್ಲಿ ಒಂಬತ್ತು ದಿನಗಳು ತಂಗಿದ್ದರು. ಆ ದಿನಗಳ ಪುಣ್ಯಸ್ಮೃತಿಯನ್ನು ಈ ಲೇಖನದಲ್ಲಿ ವ್ಯಕ್ತಪಡಿಸಿರುವರು. ಮೈಸೂರು ರಾಮಕೃಷ್ಣ ಆಶ್ರಮದಿಂದ ಪ್ರಕಟವಾದ "ಸ್ವಾಮಿ ವಿವೇಕಾನಂದರ ದಿವ್ಯಸ್ಮೃತಿ" ಎಂಬ ಗ್ರಂಥದಿಂದ ಆಯ್ದ ಭಾಗವಿದು.**

**ಬೆಳಗಾಂ, ಮಂಗಳವಾರ, ಅಕ್ಟೋಬರ್ ೧೮, ೧೮೯೨ :** ಸಂಜೆಯ ವೇಳೆ ದೃಢಕಾಯದ ಪ್ರಸನ್ನ ಮುಖಮುದ್ರೆಯ ಯುವಕ ಸಂನ್ಯಾಸಿಯೊಬ್ಬರು ನನ್ನ ಮನೆಯ ಮುಂದೆ ಬಂದರು. ನನ್ನ ವಕೀಲ ಮಿತ್ರರೊಬ್ಬರು ಅವರ ಜತೆ ಇದ್ದರು. ಸ್ನೇಹಿತರು ಅವರ ಪರಿಚಯ ಮಾಡಿಸಿದರು: "ಇವರು ಬಂಗಾಳಿಸಂನ್ಯಾಸಿಗಳು. ನಿಮ್ಮನ್ನು ನೋಡಲು ಬಂದಿರುವರು." ನಾನವರನ್ನು ದಿಟ್ಟಿಸಿ ನೋಡಿದೆ—ಪ್ರಸನ್ನ ಮುಖ, ಮಿಂಚುವ ಕಣ್ಣುಗಳು, ಗೈರಿಕ ವಸನ, ಕಾಲಿನಲ್ಲಿ ಮಹಾರಾಷ್ಟ್ರೀಯ ಪಾದರಕ್ಷೆ, ತಲೆಯ ಮೇಲೆ ಕಾವಿ ಬಣ್ಣದ ಪೇಟ. ಆ ಮೋಹಕ ಆಕೃತಿ ಇನ್ನೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ. ಅದು ನನ್ನ ಮನ ತಣಿಸಿತು, ನನ್ನನ್ನು ಆಕರ್ಷಿಸಿತು. ಆಗ ನನಗೆ ಏಕೆ ಹಾಗೆಂದು ತಿಳಿಯದಾಯಿತು...

ಸಂನ್ಯಾಸಿಗಳೆಲ್ಲ ಪಕ್ಕ ಮೋಸಗಾರರೆಂದು ನನ್ನ ನಂಬಿಕೆಯಾಗಿತ್ತು. ಆಗ ಸ್ವಾಭಾವಿಕವಾಗಿಯೇ ಇವರೂ ಕೂಡ ಯಾವುದೊ ಉದ್ದೇಶಕ್ಕಾಗಿಯೇ ಬಂದಿರುವರೆಂದು ಭಾವಿಸಿದೆ. ನನ್ನ ವಕೀಲ-ಸ್ನೇಹಿತರು ಮರಾಠಿ, ಇವರು ಬಂಗಾಳಿ. ಬಂಗಾಳಿಗಳಿಗೆ ಮರಾಠಿಗಳೊಡನೆ ಇರುವುದಕ್ಕೆ ಸರಿಹೋಗುವುದಿಲ್ಲ; ಅದಕ್ಕಾಗಿಯೇ ನನ್ನೊಡನೆ ಇರಲು ಬಂದಿದ್ದಾರೆ—ಹೀಗೆಲ್ಲ ಭಾವಿಸುತ್ತ ನಾನವರನ್ನು ನನ್ನ ಮನೆಯಲ್ಲಿರಲು ಸ್ವಾಗತಿಸಿದೆ. "ನಿಮ್ಮ ಸಾಮಾನುಗಳನ್ನೆಲ್ಲ ತರಬಹುದೆ?" ಎಂದು ಕೇಳಿದೆ. ಅವರೆಂದರು: "ನನಗೆ ವಕೀಲರ ಮನೆಯಲ್ಲಿ ಚೆನ್ನಾಗಿಯೇ ಇದೆ. ಈಗ ಬಂಗಾಳಿಯೊಬ್ಬರು ಸಿಕ್ಕಿದರೆಂದು ಅವರ ಮನೆಯಿಂದ ಹೊರಟರೆ ಅವರ ಮನಸ್ಸಿಗೆ ನೋವಾಗುವುದು. ಏಕೆಂದರೆ ಅವರ ಮನೆಯವರೆಲ್ಲ ನನ್ನನ್ನು ತುಂಬ ಪ್ರೀತಿಸುತ್ತಾರೆ ಮತ್ತು ತುಂಬ ಗೌರವಿಸುತ್ತಾರೆ. ಆದರೆ ಇದರ ಬಗ್ಗೆ ಯೋಚನೆ ಮಾಡಿ ಅನಂತರ ತಿಳಿಸುತ್ತೇನೆ." ಅಂದು ರಾತ್ರಿ ಹೆಚ್ಚು ಮಾತು ಕಥೆ ನಡೆಯಲಿಲ್ಲ. ಆದರೆ ಅವರ ಸ್ವಲ್ಪ ಮಾತಿನಿಂದ ನನಗಿಂತ ಅವರು ಹೆಚ್ಚು ವಿದ್ವಾಂಸರು ಮತ್ತು ಬುದ್ಧಿವಂತರು ಎಂದು ದೃಢವಾಯಿತು. ಅವರು ಇಷ್ಟಪಟ್ಟಿದ್ದರೆ ಚೆನ್ನಾಗಿ ಹಣ ಗಳಿಸಬಹುದಿತ್ತು, ಆದರೆ ಅವರು ಹಣ ಮುಟ್ಟುತ್ತಿರಲಿಲ್ಲ. ಸುಖಜೀವನವನ್ನು ನಡೆಸುವುದಕ್ಕೆ ಅವರಿಗೆ ಏನೂ ಇಲ್ಲದಿದ್ದರೂ ನನಗಿಂತ ಸಾವಿರಪಾಲು ಆನಂದದಿಂದಿದ್ದರು. ನನಗನಿಸಿತು ಅವರಿಗೆ ಯಾವ ಕೊರತೆಯೂ ಇಲ್ಲವೆಂದು; ಏಕೆಂದರೆ ಅವರಲ್ಲಿ ವೈಯಕ್ತಿಕ ಗಳಿಕೆಯ ಯೋಚನೆಯೇ ಇರಲಿಲ್ಲ. ಅವರು ನನ್ನ ಮನೆಗೆ ಬರುವುದಿಲ್ಲವೆಂದು ತಿಳಿದಾಗ ಬೆಳಿಗ್ಗೆ ಟೀಗಾದರೂ ಬನ್ನಿ ಎಂದು ಕೇಳಿಕೊಂಡೆ. ಅವರು ಒಪ್ಪಿದರು, ವಕೀಲರೊಡನೆ ಹಿಂದಿರುಗಿದರು. ರಾತ್ರಿಯೆಲ್ಲ ಅವರ ಬಗ್ಗೆಯೇ ಯೋಚಿಸುತ್ತಿದ್ದೆ. ಆ ಮುಗುಳ್ನಗೆಯ ಮುಖ ನನಗಿನ್ನೂ ಕಣ್ಣಿಗೆ ಕಟ್ಟಿದಂತಿತ್ತು. ಇಷ್ಟೊಂದು ಸಂತೃಪ್ತಿಯ ಸುಖಜೀವಿಯನ್ನು ನಾನು ಹಿಂದೆಂದೂ ನೋಡಿರಲಿಲ್ಲ. ಹಣವಿಲ್ಲದವನಿಗೆ ಮರಣವೇ ಲೇಸು, ಮತ್ತು ಆಶಾಮುಕ್ತ ಜೀವನ ಒಂದು ಅಸಾಧ್ಯ ಎಂದು ನಂಬಿದ್ದೆ. ಆದರೆ ಇಂದು ಆ ನಂಬಿಕೆ ತತ್ತರಿಸಿತು, ದುರ್ಬಲವಾಯಿತು.

**ಅಕ್ಟೋಬರ್ ೧೯, ೧೮೯೨ :** ನಾನು ಬೆಳಿಗ್ಗೆ ಆರು ಗಂಟೆಯಿಂದ ಸ್ವಾಮೀಜಿಯವರಿಗಾಗಿ ಕಾಯುತ್ತಿದ್ದೆ. ಗಂಟೆ ಎಂಟಾಯಿತು. ಇನ್ನು ಕಾಯುವುದು ಪ್ರಯೋಜನವಿಲ್ಲವೆಂದು ಬಗೆದು ಒಬ್ಬ ಸ್ನೇಹಿತರೊಡನೆ ಸ್ವಾಮೀಜಿಯವರಿದ್ದ ಸ್ಥಳಕ್ಕೆ ಹೋದೆ. ಅಲ್ಲಿ ಸ್ವಾಮೀಜಿಯವರು ವಕೀಲರೇ ಮುಂತಾದ ಗೌರವಾನ್ವಿತ ವಿದ್ವಾಂಸರೊಡನೆ ಮಾತನಾಡುತ್ತ ಕುಳಿತಿದ್ದರು. ಸ್ವಲ್ಪವೂ ಸಂಕೋಚವಿಲ್ಲದೆ ಅವರ ಪ್ರಶ್ನೆಗಳಿಗೆಲ್ಲ ಉತ್ತರಿಸುತ್ತಿದ್ದರು—ಕೆಲವೊಮ್ಮೆ ಇಂಗ್ಲೀಷಿನಲ್ಲಿ ಕೆಲವೊಮ್ಮೆ ಹಿಂದಿ ಅಥವಾ ಸಂಸ್ಕೃತದಲ್ಲಿ. ಅಲ್ಲಿ ಹಕ್ಸ್ಲೀಯ ವಿಚಾರ ತತ್ತ್ವವನ್ನೇ ಬೈಬಲ್ ಎಂದು ಪರಿಗಣಿಸುವ ನನ್ನಂಥವರೂ ಇದ್ದರು. ಅದರ ಆಧಾರದ ಮೇಲೆ ಅವರು ಸ್ವಾಮೀಜಿಯವರೊಡನೆ ವಾದ ಹೂಡಿದ್ದರು. ಆದರೆ ತಮ್ಮ ತೀಕ್ಷ್ಣವಾದ ಬುದ್ಧಿ ಕೌಶಲದಿಂದ ಅವರ ಸದ್ದಡಗಿಸಿದರು. ಅವರಿಗೆ ವಂದಿಸಿ ಕುಳಿತುಕೊಳ್ಳುವಾಗ "ಇವರು ಮನುಷ್ಯರೇ ದೇವತೆಯೇ?" ಎಂದು ಭಾವಿಸಿದೆ...

ಒಂಬತ್ತು ಗಂಟೆಯವರೆಗೂ ಸಂಭಾಷಣೆ ಮುಂದುವರಿಯಿತು. ಅನಂತರ ಕೋರ್ಟು ಕಛೇರಿಗಳಿಗೆ ಹೋಗಬೇಕಾದವರು ಹೊರಟರು. ಉಳಿದವರು ಅಲ್ಲಿಯೇ ಕುಳಿತರು. ಈಗ ಸ್ವಾಮೀಜಿಯವರ ದೃಷ್ಟಿ ನನ್ನ ಮೇಲೆ ಬಿತ್ತು. ಅವರಂದರು, "ಇಷ್ಟೊಂದು ಜನರನ್ನು ನಿರಾಶೆಗೊಳಿಸಿ ನಿನ್ನ ಮನೆಗೆ ಬರಲು ನನಗೆ ಮನಸ್ಸಾಗಲಿಲ್ಲ. ದಯವಿಟ್ಟು ಬೇಜಾರು ಮಾಡಿಕೊಳ್ಳಬೇಡ." ನಾನು ಅವರನ್ನು ನಮ್ಮ ಮನೆಗೆ ಬಂದಿರಬೇಕೆಂದು ಒತ್ತಾಯಿಸಿದಾಗ ಕೊನೆಗೆ ಅವರೆಂದರು, "ಈ ಮನೆಯೊಡೆಯನನ್ನು ನೀನು ಒಪ್ಪಿಸಿದರೆ ನಾನು ಬರುತ್ತೇನೆ," ಎಂದು. ನನ್ನ ವಕೀಲ ಸ್ನೇಹಿತರನ್ನು ಹೇಗೊ ಒಪ್ಪಿಸಿ ಸ್ವಾಮೀಜಿಯವರನ್ನು ಕರೆದುಕೊಂಡು ಬಂದೆ. ಅವರ ಸಾಮಾನು ಇಷ್ಟೆ : ಒಂದು ಕಮಂಡಲು ಮತ್ತು ಕಾವಿಬಟ್ಟೆಯಲ್ಲಿ ಸುತ್ತಿದ ಒಂದು ಪುಸ್ತಕ. ಸ್ವಾಮೀಜಿ ಆಗ ಫ್ರೆಂಚ್-ಸಂಗೀತವನ್ನು ಕಲಿಯುತ್ತಿದ್ದರು. ನಾವು ಹತ್ತು ಗಂಟೆಗೆ ಟೀ ಸೇವಿಸಿದೆವು. ನನ್ನ ಸಂದೇಹಗಳನ್ನು ನಾನು ವ್ಯಕ್ತಪಡಿಸಲು ಹಿಂಜರಿಯುತ್ತಿರುವುದು ಅವರಿಗೆ ಅರ್ಥವಾಯಿತು. ನನ್ನ ಸ್ವಲ್ಪ ಮಾತಿನಿಂದಲೇ ನನ್ನ ಮಾನಸಿಕ ಸ್ಥಿತಿಯನ್ನು ಕಂಡುಕೊಂಡರು...

ಅವರು ದೇಶವನ್ನು ಸುತ್ತುತ್ತಿದ್ದಾಗ ಸಂಭವಿಸಿದ ಅನೇಕ ರೋಮಾಂಚಕಾರಿ ಘಟನೆಗಳನ್ನು ಹೇಳಿದರು. ನನಗೆ ಅದನ್ನು ಕೇಳುತ್ತಿರುವಾಗ ಅವರು ಅನೇಕ ಕಷ್ಟ-ಕೋಟಲೆಗಳನ್ನು ಅನುಭವಿಸಿರಬೇಕು

ಎಂದೆನಿಸಿತು. ಆದರೆ ಅವರು ಅವನ್ನೆಲ್ಲ ನಗುನಗುತ್ತ ಹೇಳುತ್ತಿದ್ದರು. ಅವರಿಗೆ ಅವೆಲ್ಲ ಒಂದು ಮೋಜು! ಕೆಲವೊಮ್ಮೆ ಅವರಿಗೆ ಊಟವೇ ಇರುತ್ತಿರಲಿಲ್ಲ, ಕೆಲವೊಮ್ಮೆ ಎಷ್ಟೊಂದು ಮೆಣಸಿನಕಾಯಿ ತಿನ್ನಬೇಕಾಯಿತೆಂದರೆ ಆ ಉರಿಯನ್ನು ತಣಿಸಲು ಹುಣಸೆ ರಸವನ್ನು ಕುಡಿಯಬೇಕಾಯಿತು. ಕೆಲವು ಕಡೆ "ಸಂನ್ಯಾಸಿಗಳಿಗೆ ಇಲ್ಲಿ ಸ್ಥಳವಿಲ್ಲ" ಎಂದು ಅವರನ್ನು ಹೊರ ಹಾಕಿದ್ದರು. ಕೆಲವೊಮ್ಮೆ ಸರ್ಕಾರೀ ಗುಪ್ತಚಾರರ ತೊಂದರೆಗೆ ಒಳಪಟ್ಟಿದ್ದರು. ಹೀಗೆ ಅನೇಕ ಘಟನೆಗಳನ್ನು ಅವರು ತಮ್ಮದೇ ಆದ ಹಾಸ್ಯಭರಿತ ಶೈಲಿಯಲ್ಲಿ ಸ್ವಲ್ಪವೂ ಉದ್ವಿಗ್ನತೆ ಇಲ್ಲದೆ ವಿವರಿಸಿದರು. ಅವರಿಗೆ ಇವೆಲ್ಲ ಹಾಸ್ಯದಂತಿದ್ದರೂ ನನಗೆ, ಕೇಳಿದವನಿಗೆ ರಕ್ತ ಹೆಪ್ಪುಗಟ್ಟಿದಂತಾಯಿತು. ತುಂಬ ರಾತ್ರಿಯಾದ ಮೇಲೆ ಅವರಿಗೆ ಹಾಸಿಗೆ ಸಿದ್ಧಪಡಿಸಿ ನಾನು ಮಲಗಲು ಹೋದೆ. ಆದರೆ ಅಂದು ರಾತ್ರಿ ನನಗೆ ನಿದ್ರೆಯೇ ಬಾರದು. ನನ್ನಲ್ಲಿ ಆಳವಾಗಿ ಬೇರುಬಿಟ್ಟಿದ್ದ ಇದುವರೆಗೂ ನನ್ನನ್ನು ಕಾಡುತ್ತಿದ್ದ ಸಂದೇಹಗಳೆಲ್ಲ ಸ್ವಾಮೀಜಿಯವರ ದರ್ಶನದಿಂದಲೇ ಪಲಾಯನ ಮಾಡಿದವಲ್ಲ! ಎಂದು ನನಗೆ ಆಶ್ಚರ್ಯವಾಯಿತು. ನನಗೀಗ ಕೇಳುವುದೇನೂ ಇಲ್ಲ. ದಿನಗಳು ಕಳೆದಂತೆ ನನ್ನ ಕುಟುಂಬದವರಲ್ಲಿ ಮಾತ್ರವಲ್ಲ ಆಳು-ಕಾಳುಗಳಲ್ಲಿ ಕೂಡ ಅವರ ಮೇಲೆ ಅಪಾರ ಪ್ರೀತಿ-ಗೌರವ ಉಂಟಾಯಿತು. ಎಷ್ಟೊಂದು ಶ್ರದ್ಧೆಯಿಂದ ಅವರ ಸೇವೆ ಮಾಡುತ್ತಿದ್ದರೆಂದರೆ ಸ್ವಾಮೀಜಿಯವರಿಗೆ ಸಂಕೋಚವಾಗುತ್ತಿತ್ತು.


ಸ್ವಾಮಿ ವಿವೇಕಾನಂದರು, ಬೆಳಗಾಮಿನಲ್ಲಿ

ಅಕ್ಟೋಬರ್ ೨೦,೧೮೯೨ : ಬೆಳಿಗ್ಗೆ ಸ್ವಾಮೀಜಿಯವರಿಗೆ ನಾನು ನಮಸ್ಕರಿಸಿದೆ ನನಗೆ ಅವರ ಮೇಲೆ ಭಕ್ತಿ ಹೆಚ್ಚಾದಂತೆಲ್ಲ ಅವರೊಡನೆ ಧೈರ್ಯವಾಗಿ ಮಾತನಾಡುವ ಶಕ್ತಿ ಬಂತು. ನಾನು ಹೇಳುತ್ತಿದ್ದ ಕಾಡು, ನದಿ, ಗುಡ್ಡ ಮತ್ತು ಕಣಿವೆಗಳ ವೃತ್ತಾಂತವನ್ನು ಸ್ವಾಮೀಜಿ ಆಸಕ್ತಿಯಿಂದ ಕೇಳುತ್ತಿದ್ದರು. ಈ ಪಟ್ಟಣಕ್ಕೆ ಬಂದು ಅವರು ನಾಲ್ಕು ದಿನಗಳಾದವು. ಐದನೆಯ ದಿನ ಅವರೆಂದರು : "ಸಂನ್ಯಾಸಿ ಒಂದು ಪಟ್ಟಣದಲ್ಲಿ ಮೂರು ದಿನಗಳಿಗಿಂತ ಹೆಚ್ಚು ಕಾಲ ಇರಕೂಡದು ಮತ್ತು ಹಳ್ಳಿಯಲ್ಲಿ ನಾಲ್ಕು ದಿನಗಳಿಗಿಂತ ಹೆಚ್ಚು ಇರಬಾರದು. ನಾನು ಬೇಗ ಹೊರಡಬೇಕು." ನಾನು ಕೇಳಲೇ ಇಲ್ಲ. ಅವರೊಡನೆ ವಾದಿಸತೊಡಗಿದೆ. ಬಹಳ ಹೊತ್ತು ಚರ್ಚೆಯಾದಮೇಲೆ ಅವರೆಂದರು :"ಒಂದು ಜಾಗದಲ್ಲಿ ಒಬ್ಬನು ಬಹಳ ಕಾಲವಿದ್ದರೆ ಬೇರೆಯವರ ಮೇಲೆ ವ್ಯಾಮೋಹವುಂಟಾಗುವುದು. ನಾವು ಮನೆ-ಮಠ ಬಂಧು-ಬಳಗ ಎಲ್ಲ ಬಿಟ್ಟು ಬಂದಿದ್ದೇವೆ. ಈ ಎಲ್ಲ ಮಾಯಾ-ಮೂಲಗಳಿಂದ ದೂರವಿರುವುದು ನಮಗೆ ಯುಕ್ತ." "ನೀವೆಂದೂ ಮಾಯೆಯ ಬಲೆಗೆ ಬೀಳಲಾರಿರಿ" ಎಂದು ಹೇಳಿ ಅವರನ್ನು ಇರಲು ಅನುನಯದಿಂದ ಕೇಳಿಕೊಂಡೆ. ಕೊನೆಗೆ ಮತ್ತೆ ಎರಡು ದಿನ ಇರಲು ಒಪ್ಪಿದರು.

ಸ್ವಾಮೀಜಿಯವರು ನನ್ನ ಮನೆಯಲ್ಲಿರುವಾಗ ಸಂಜೆ ಎಷ್ಟೊಂದು ಜನ ಬರುತ್ತಿದ್ದರೆಂದರೆ ಅದೊಂದು ದೊಡ್ಡ ಸಭೆಯಂತೆ ಕಾಣುತ್ತಿತ್ತು. ಒಂದು ದಿನ ಗಂಧದ ಮರದ ಕೆಳಗೆ ಕುಳಿತು ಅವರಾಡಿದ ಮಾತನ್ನು ನಾನೆಂದೂ ಮರೆಯಲಾರೆ. ಅದನ್ನು ಈಗ ಹೇಳುವುದಿಲ್ಲ. ಅದಕ್ಕೆ ಉದ್ದ ಪೀಠಿಕೆ ಬೇಕಾಗಿರುವುದರಿಂದ ಮುಂದೊಂದು ಸಂದರ್ಭದಲ್ಲಿ ಪ್ರಸ್ತಾಪಿಸುತ್ತೇನೆ. ಇಲ್ಲಿ ನನ್ನ ಬಗ್ಗೆಯೇ ಇನ್ನೂ ಸ್ವಲ್ಪ ಹೇಳಬಯಸುತ್ತೇನೆ. ಸ್ವಲ್ಪ ಕಾಲದ ಹಿಂದೆ ನನ್ನ ಪತ್ನಿ ಯಾರಾದರೂ ಗುರುವಿನ ಮೂಲಕ ಮಂತ್ರದೀಕ್ಷೆ ಸ್ವೀಕರಿಸಬೇಕೆಂಬ ತನ್ನ ಬಯಕೆಯನ್ನು ವ್ಯಕ್ತಪಡಿಸಿದ್ದಳು. ನಾನು ಹೇಳಿದ್ದೆ, "ನೀನು ಎಂಥ ಗುರುವನ್ನು ಆರಿಸಿಕೊಳ್ಳಬೇಕೆಂದರೆ ಅವನು ನನ್ನ ಗೌರವಕ್ಕೂ ಪಾತ್ರನಾಗುವ ಸಾಮರ್ಥ್ಯವನ್ನು ಪಡೆದಿರಬೇಕು. ಆ ಗುರು ಮನೆಗೆ ಬಂದರೇ ನನ್ನಲ್ಲಿ ತಾತ್ಸಾರ ಭಾವನೆ ಉಂಟಾಗುವಂತಿದ್ದರೆ ಅಂಥ ಗುರುವಿನಿಂದ ನಿನಗೇನೂ ಪ್ರಯೋಜನವಾಗದು. ನಮಗೆ ಒಳ್ಳೆಯ ವ್ಯಕ್ತಿ ದೊರೆತರೆ ನಾವಿಬ್ಬರೂ ದೀಕ್ಷೆ ಸ್ವೀಕರಿಸೋಣ. ಇಲ್ಲದಿದ್ದರೆ ಇಲ್ಲ." ಆಕೆಯೂ ಇದಕ್ಕೆ ಒಪ್ಪಿದ್ದಳು. ಈಗ ನನ್ನಾಕೆಯನ್ನು "ಈ ಸ್ವಾಮೀಜಿಯವರ ಶಿಷ್ಯಳಾಗಲು ಬಯಸುವೆಯಾ?" ಎಂದು ಕೇಳಿದೆ. "ಅವರು ಒಪ್ಪುವರೆ? ಒಪ್ಪಿದರೆ ನಾವೇ ಧನ್ಯರು"—ಎಂದಳಾಕೆ.

ಒಂದು ದಿನ ತುಂಬ ಸಂಕೋಚದಿಂದ ಸ್ವಾಮೀಜಿಯವರನ್ನು ಕೇಳಿದೆ, "ಸ್ವಾಮೀಜಿ, ನನ್ನದೊಂದು ಬಯಕೆ ಇದೆ. ಪೂರ್ಣಗೊಳಿಸುವಿರಾ?" ಅವರು ಏನೆಂದು ಕೇಳಿದಾಗ ನನಗೆ ಮತ್ತು ನನ್ನ ಕುಟುಂಬಕ್ಕೆ ಮಂತ್ರದೀಕ್ಷೆ ನೀಡಬೇಕೆಂದು ಪ್ರಾರ್ಥಿಸಿದೆ. ಅವರೆಂದರು, "ಗೃಹಸ್ಥರು ಗೃಹಸ್ಥ ಗುರುವನ್ನೇ ಸ್ವೀಕರಿಸುವುದು ಒಳಿತು. ಗುರುವಾಗುವುದು ಸಾಮಾನ್ಯವಲ್ಲ. ಗುರುವು ಶಿಷ್ಯನ ಜವಾಬ್ದಾರಿಯನ್ನು ಹೊರಬೇಕು. ದೀಕ್ಷೆಗೆ ಮುಂಚೆ ಶಿಷ್ಯನು ಗುರುವನ್ನು ಕೊನೆಯ ಪಕ್ಷ ಮೂರುಬಾರಿಯಾದರೂ ಸಂಧಿಸಿರಬೇಕು." ಹೀಗೆಲ್ಲ ಹೇಳಿ ಅವರು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ನಾನೂ ಬಿಡಲಿಲ್ಲ. ಕೊನೆಗೆ ಒಪ್ಪಿದರು. ಅಕ್ಟೋಬರ್ ೨೫, ೧೮೯೨ರಂದು ನಮಗೆ ದೀಕ್ಷೆಯಾಯಿತು. ಅವರ ಒಂದು ಭಾವಚಿತ್ರ ತೆಗೆದಿಟ್ಟುಕೊಳ್ಳಬೇಕೆಂದು ನಾನು ಬಯಸಿದೆ. ಅವರು ಒಪ್ಪಲೇ ಇಲ್ಲ. ಬಹಳ ಹೆಣಗಾಡಿ ಅವರ ಮನವೊಲಿಸಿ ೨೮ರಂದು ಅವರ ಒಂದು ಫೋಟೋ ತೆಗೆದೆ....

ಹೀಗೆ ಅಕ್ಟೋಬರ್ ೨೭ರವರೆಗೆ ಸ್ವಾಮೀಜಿಯವರ ಉಪಸ್ಥಿತಿ ನಮಗೆ ಆನಂದದ ರಸದೌತಣವಾಗಿತ್ತು. ೨೭ರಂದು ಅವರೆಂದರು: "ನಾನಿನ್ನು ಇರುವುದಿಲ್ಲ. ನಾನು ರಾಮೇಶ್ವರದ ಕಡೆಗೆ ಹೊರಟಿದ್ದೇನೆ." ಅವರನ್ನು ಇನ್ನೂ ಇರಿಸಿಕೊಳ್ಳುವ ನನ್ನ ಪ್ರಯತ್ನ ಸಫಲವಾಗಲಿಲ್ಲ. ೨೭ರಂದು ಮೇಲ್ ಟ್ರೈನಿನಲ್ಲಿ ಮರ್ಮಗೋವಾಕ್ಕೆ ಹೋಗಲು ನಿರ್ಧರಿಸಿದರು. ಅವರಿಗೊಂದು ಟಿಕೇಟ್ ಖರೀದಿಸಿದೆ. ಅವರನ್ನು ಟ್ರೈನಿನಲ್ಲಿ ಕೂರಿಸಿ ನಮಸ್ಕರಿಸಿ ಹೇಳಿದೆ: "ಸ್ವಾಮೀಜಿ, ನಾನೆಂದೂ ಯಾರಿಗೂ ಸಾಷ್ಟಾಂಗ ಪ್ರಣಾಮ ಮಾಡಿರಲಿಲ್ಲ. ಇಂದು ಮಾಡುತ್ತಿದ್ದೇನೆ. ಧನ್ಯತೆಯ ಭಾವ ನನ್ನ ಹೃದಯವನ್ನು ತುಂಬುತ್ತಿದೆ."

✡